ಶ್ರೀ ಎಂ. ಎಚ್. ಜಯಪ್ರಕಾಶ್ ನಾರಾಯಣ್.—ಸ್ವಾಮಿ ೧೯೭೧ನೇ ಇಸವಿಯಲ್ಲಿ ಪ್ರೆಸಿಡೆಂಟ್ ರೂಲ್ ಇದ್ದಾಗ ಪೋಲೀಸರು ಅಲ್ಲಿಗೆ ಹೋಗಿ ಸೇರಿಕೊಂಡಿದ್ದಾರೆ. ಇವತ್ತು ಮಾನ್ಯ ಮುಖ್ಯ ಮಂತ್ರಿಗಳು ಈ ಬಗ್ಗೆ ಪರಿಶೀಲನೆ ನಡೆಸಿ ಈಗಾಗಲೇ ಈ ಬಗ್ಗೆ ಒಂದು ಆರ್ಡರ್ ಮಾಡಿದ್ದಾರೆ. ಆ ಆರ್ಡರನ್ನು ಪೋಲೀಸ್ ಕಮಿಷನರ್ ಅವರು ಜಾರಿಗೆ ತರದೆ, ತಡೆಮಾಡಿದ್ದಾರೆ. ಅದನ್ನು ಜಾರಿಗೆ ತಂದು ಇದಗಾ ಅನ್ನು ಪ್ರಾರ್ಥನಾ ಮಂದಿರಕ್ಕೆ ಕೊಟ್ಟು, ಧೋಬಿ ಅಂಗಡಿಗಳನ್ನು, ಕ್ಷೌರದ ಅಂಗಡಿಗಳನ್ನು ಅಲ್ಲಿಂದ ಕೂಡಲೇ ತೆಗೆಸುತ್ತೀರಾ ?

SRI S. M. YAHYA.—It is a fact that the Hon'ble Chief Minister passed an order asking the Police to vacate the premises. But on the orders passed by the Chief Minister the Inspector General of Police had preferred an appeal and the matter is before the Chief Minister, who will consider all the aspects, the historical back-ground, the geographical situation and also the religious feeling of a section of the people.

ಶ್ರೀ ಎಂ. ಎಚ್. ಜಯಪ್ರಕಾಶ್‌ನಾರಾಯಣ್.—(೩) ಪ್ರಶ್ನೆಗೆ ಉತ್ತರ ಕೊಡುತ್ತಾ ಆ ಬಗ್ಗೆ ವಾದ ವಿವಾದಗಳಿರುವುದರಿಂದ ಪ್ರಕರಣವನ್ನು ಇನ್ನಷ್ಟು ಪರಿಶೀಲಿಸಲಾಗುತ್ತಿದೆ ಎಂದು ಹೇಳಲಾಗಿದೆ. ಇದೇ ರೀತಿ ಎಲ್ಲಿಯವರೆಗೆ ಪರಿಶೀಲನೆಯಾಗುತ್ತಲೆ ಇರುತ್ತದೆಯೋ ಗೊತ್ತಿಲ್ಲ; ಆದಷ್ಟು ಜಾಗ್ರತೆ ತೀರ್ಮಾನ ತೆಗೆದುಕೊಳ್ಳುತ್ತೀರಾ ?

(ಉತ್ತರವಿಲ್ಲ)

ಶ್ರೀ ಕೋಣಂದೂರು ಲಿಂಗಪ್ಪ.—ಮುಖ್ಯ ಮಂತ್ರಿಗಳು ಆರ್ಡರ್‌ಹೊರಡಿಸಿದ ಮೇಲೆ ಪುನಃ ಆ ಬಗ್ಗೆ ಐ.ಜಿ.ಪಿ. ಅವರು ಅಪೀಲ್ ಮಾಡುವುದಕ್ಕೆ ಕಾರಣವೇನಿದೆ ?

ಶ್ರೀ ಎಸ್. ಎಂ. ಯಾಹ್ಯಾ.—ಅವರ ಕ್ಲೈಮ್ ಇದೆ ಎಂದು ಅಪೀಲ್ ಮಾಡಿದ್ದಾರೆ. ಈಗ ಅದು ಮುಖ್ಯಮಂತ್ರಿಗಳ ಎದುರಿಗೆ ಇದೆ. ಅದನ್ನು ಅವರು ಪರಿಶೀಲನೆ ಮಾಡಿ ಯಾವ ರೀತಿ ಬಗೆಹರಿಸಬೇಕೊ ಅದರಂತೆ ಬಗೆಹರಿಸುತ್ತಾರೆ.

COLLECTION OF MOTOR VEHICLE TAXES

268. SRI K. SRIRAMULU (Gandhinagar).—

Will the Minister for Transport and Housing be pleased to state :—

(*a*) the income derived by the Government per annum by way of taxes on cars, buses, lorries, tempos and other vehicles in Bangalore,

(*b*) the amount of expenditure incurred by way of salary etc. for the staff working in the concerned department from out of the above income ;

(*c*) the facilities provided to the owners of the vehicles when they go for remitting the taxes ,

(*d*) whether Government intended to make arrangements to collect the vehicle taxes at four different zones by bifurcating the same instead of at one place, if so, the expenditure likely to be incurred for this ?

SRI K. H. RANGANATH (Minister for Transport and Housing).—

(*a*) During 1972-73 an annual income of Rs. 4,84,60,773-67 has been derived from Bangalore District. No separate figures for Bangalore City.

(*b*) Expenditure towards the concerned staff is Rs. 6,44,650-11.

(*c*) The following facilities have been provided.—

(1) The vehicle owners remit their vehicle taxes through M.O and Bank Drafts without going to R.T O.' s Office.

(2) In order to faciliate the owners who wish to obtain the tokens by making the cash payment personally, more than 30 receiving centres will be opened in Local Transport Office one weak in advance at a period when quarterly taxes are due according to the different vehicles and in serial order of the number of the vehicles. There will be 4 clerks in each counter who will co-operate in receiving the tax amount and issuing tokens.

(3) With a view to facilitate payment or Motor Vehicle Taxe expeditiously and without any difficulty, six enquiry centres with six office Superientendents will also be opened.

(4) The Motor Vehicles Inspectors and the Superentendents at Mangalore and Bangalere where more number of motor vehicles are in existence, the power of signing the tokens has been delegated to them for the purpose of returning the tokens after receiving the tax payment. In addition to the above facilities the owners of the vehicles are provided with resting and drinking water facilities.

(*d*) The question of forming 4 zones in Bangalore City for collecting vehicle taxes is under the consideration of the Government. The additional expenditure per annum on this behalf, it is estimated, at Rs. 6 64,000.

ಶ್ರೀ ಕೆ. ಶ್ರೀರಾಮಂಜು.—ಹೊಸದಾಗಿ ೪ ಜೋನುಗಳನ್ನು ಮಾಡುವ ವಿಷಯ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದೀರಿ. ಇದೇ ರೀತಿ ೧೯೭೬ನೇ ಇಸವಿಯಲ್ಲಿಯೂ ಉತ್ತರ ಕೊಡಲಾಗಿತ್ತು, ಆದರೆ ಇನ್ನೂ ಕಾರ್ಯಗತವಾಗದಿರುವುದಕ್ಕೆ ಕಾರಣವೇನು ? ಮತ್ತು ಇತರಕ್ಕಿಂಥ ತೊಂದರೆಗಳು ಏನು ?

† ಶ್ರೀ ಕೆ. ಎಚ್. ರಂಗನಾಥ್.— ತೊಂದರೆ ಇದೆ ಎಂದು ಸರ್ಕಾರ ಹೇಳಲಿಲ್ಲ, ಇದರ ಜೊತೆಗೆ ಇನ್ನೂ ಕೆಲವು ಪ್ರಪೋಜಲ್‌ಗಳು ಇವೆ. ಸಾರ್ವಜನಿಕರಿಗೆ ಆಗುತ್ತಿರುವ ತೊಂದರೆಗಳನ್ನು ಆದಷ್ಟು ಕಡಿಮೆ ಮಾಡಬೇಕೆಂಬ ಉದ್ದೇಶ ಸರ್ಕಾರಕ್ಕೆ ಇದೆ. ಉದಾಹರಣೆಗಾಗಿ ಹೇಳುವುದಾದರೆ, ಈಗ ಒಂದು ವರ್ಷದ ಟಿವರ್ಡ್ ಎಂದು ಏನಿದೆ, ಅದಕ್ಕೆ ಬೇರೆ ಆರ್ಥ ಬರುವ ರೀತಿಯಲ್ಲಿ ಅಂದರೆ ವಾಹನಗಳ ರಿಜಿಸ್ಟ್ರೇಷನ್ ಆದ ತಾರೀಖಿನಿಂದ ಒಂದು ವರ್ಷ ಎಂದು ಅಮೆಂಡ್‌ಮೆಂಟ್ ಮಾಡಿದರೆ ಆಗ ಈ ಒಂದು ತೊಂದರೆ ನಿವಾರಣೆಯಾಗುತ್ತದೆ. ಪ್ರತಿ ತ್ರೈಮಾಸಿಕದಲ್ಲಿ ಇದರ ಬಗ್ಗೆ ಏನು ಒಂದು ರಷ್ ಆಗುತ್ತದೆ, ಅದು ಕಡಿಮೆಯಾಗುತ್ತದೆ. ಅದೇ ರೀತಿ ನಾನು ಮೊನ್ನೆ ತಾನೆ ಈ ಇಲಾಖೆಯ ಡಿಮ್ಯಾಂಡ್‌ಗಳ ಮೇಲೆ ಉತ್ತರ ಕೊಡುವಾಗ ಸಹ ಈ ಬಗ್ಗೆ ಕೆಲವು ಸಲಹೆಗಳನ್ನು ಪಿಚಾರ ಮಾಡಲಾಗುತ್ತಿದೆ ಎಂದು ಹೇಳಿದ್ದೇನೆ. ಈಗ ವರ್ಷಕ್ಕೆ ೩೦೦ ರೂಪಾಯಿಗಳಿಗಿಂತ ಕಡಿಮೆ ತೆರಿಗೆ ಕಟ್ಟುತಕ್ಕಿಂಥ ವಾಹನಗಳು ಏನಿದೆ, ಅಂತಹ ವಾಹನಗಳ ತೆರಿಗೆ ಹಣವನ್ನು ಪೂರ್ತಿಯಾಗಿ ಒಂದೇ ಸಲ ತೆಗೆದುಕೊಳ್ಳಬೇಕೆಂಬ ವಿಚಾರ ಕೂಡ ಪರಿಶೀಲನೆಯಲ್ಲಿದೆ. ಇದರ ಜೊತೆಗೆ ನಾಲ್ಕು ಜೋನುಗಳನ್ನು ಮಾಡಬೇಕೆಂಬುದನ್ನು ಸಹ ವಿಚಾರ ಮಾಡುತ್ತಿದ್ದೇವೆ. ಮುಖ್ಯವಾಗಿ ಯಾವುದು ಸೂಕ್ತವೋ ಅದನ್ನು ಮಾಡಿ ಮಾನ್ಯ ಸದಸ್ಯರು ಹೇಳುತ್ತಿರುವ ತೊಂದರೆಗಳನ್ನು ನಿವಾರಣೆ ಮಾಡುವುದಕ್ಕೆ ಸರ್ಕಾರ ಪ್ರಯತ್ನ ಮಾಡುತ್ತದೆ.

ಶ್ರೀ ಕೆ. ಶ್ರೀರಾಮುಲು.— ಈ ಇಲಾಖೆಯಂ ಸಿಬ್ಬಂದಿಗಾಗಿ ರೂ. ೬,೪೪,೬೫೦—೧೧ ಪೈಸೆ ಖರ್ಚಾಗುತ್ತದೆಂದು ಇಲ್ಲಿ ಹೇಳಲಾಗಿದೆ. ಮಂತ್ರಿ ಹೊಸದಾಗಿ ನಾಲ್ಕು ಜೋನುಗಳನ್ನು ತೆರೆದರೆ ೬,೬೪,೮೦೦—೦೨ ಖರ್ಚಾಗುತ್ತದೆಂದು ಸಹ ಇಲ್ಲಿ ಹೇಳಲಾಗಿದೆ. ಈಗ ಆಗುತ್ತಿರುವ ಖರ್ಚಿನ ಜೊತೆಗೆ ಇಷ್ಟೊಂದು ಹೆಚ್ಚಿನ ಖರ್ಚು ಬರುವುದಕ್ಕೆ ಕಾರಣವೇನು ?

ಶ್ರೀ ಕೆ. ಎಚ್. ರಂಗನಾಥ್.— ಹೊಸದಾಗಿ ನಾಲ್ಕು ಜೋನಗಳನ್ನು ಮಾಡಿದರೆ ಮಂತ್ರಿ ನಾಲ್ಕು ಎಸ್ಟಾಬ್ಲಿಷ್‌ಮೆಂಟ್ ಜಾಸ್ತಿ ಆಗುತ್ತದೆ. ಅದಕ್ಕೆ ಸಿಬ್ಬಂದಿ ಬೇಕಾಗುತ್ತದೆ. ಇವನ್ನೆಲ್ಲ ಲೆಕ್ಕ ಹಾಕಿ ಇಷ್ಟು ಖರ್ಚು ಬರುತ್ತದೆ ಎಂದು ಹೇಳಲಾಗಿದೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯಿಡು.— ಬೆಂಗಳೂರು ಜಿಲ್ಲೆಯಿಂದ ಸುಮಾರು ೫ ಕೋಟಿ ರೂಪಾಯಿಗಳ ಆದಾಯ ಈ ಬಾಬಿನಿಂದ ಬರುತ್ತಿದೆ. ನಮಗೆ ಗೊತ್ತಿರುವಂತೆ ಈ ರಸ್ತೆಗಳನ್ನು ಮೆಂಟೇನ್ ಮಾಡತಕ್ಕಂಥಹ ಜವಾಬ್ದಾರಿ ನಗರ ಕಾರ್ಪೊರೇಷನ್ ಮೇಲಿದೆ. ಅದಕ್ಕೋಸರ ತಾವು ಯಾವುದೋ ಕಾಲದಿಂದ ಅವರಿಗೆ ೫ ಲಕ್ಷ ರೂಪಾಯಿಗಳನ್ನು ಕೊಡುತ್ತಿದ್ದೀರಿ. ಈಗ ಇದರ ಆದಾಯ ಹೆಚ್ಚಾಗಿರುವುದರಿಂದ ಕಾರ್ಪೊರೇಷನ್‌ರವರು ತಮಗೆ ಈ ಬಾಬಿನಿಂದ ರಸ್ತೆಗಳನ್ನು ಚೆನ್ನಾಗಿ ಇಡುವ ಉದ್ದೇಶಕ್ಕಾಗಿ ಹೆಚ್ಚು ಹಣವನ್ನು ಕೊಡಬೇಕೆಂದು ಬೇಡಿಕೆ ಸಲ್ಲಿಸಿದ್ದಾರೆಯೇ ? ಬೇಡಿಕೆ ಬಂದಿದ್ದರೆ ಅದನ್ನು ಪರಿಶೀಲನೆ ಮಾಡಿ ಹೆಚ್ಚು ಹಣ ಕೊಡುವುದಕ್ಕೆ ಏರ್ಪಾಡು ಮಾಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್. — ಈ ಪ್ರಶ್ನೆ ಹಿಂದೆ ಒಂದು ಸಲ ಬಂದಾಗ ಉತ್ತರ ಕೊಟ್ಟಿದ್ದೇನೆ. ಈಗ ಏನು ಸಮರ್ಪಕವಾಗಿಲ್ಲದಿರುವ ಕಾರಣ ಬೇರೆ ರೀತಿ ವಿಚಾರ ನಾಡಲಾಗುತ್ತಿದೆ ಎಂದು ಉತ್ತರ ಕೊಡಲಾಗಿದೆ.

ಶ್ರೀ ಕೆ. ಎಂ. ನಾಗಣ್ಣ.— ಕಳೆದ ೫–೬ ವರ್ಷಗಳಿಂದಲೂ ಕಾರ್ಪೊರೇಷನ್ ಆವರು ಜಾಸ್ತಿ ಹಣ ಕೊಡಬೇಕೆಂದು ಕೇಳುತ್ತಿದ್ದಾರೆ. ಆದಕಾರಣ ಅವರಿಗೆ ನ್ಯಾಯವಾಗಿ ಎಷ್ಟು ಸಂದಾಯವಾಗಬೇಕೋ ಅಷ್ಟನ್ನು ಜಾಗ್ರತೆ ಉದಾಶೀನ ಮಾಡದೆ ಕೊಡುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.— ಸರ್ಕಾರ ಉದಾಶೀನ ಮಾಡುತ್ತಿಲ್ಲ., ಹಿಂದೆ ಇದ್ದ ಕಾನೂನನ್ನು ರಿವೀಲ್ ಮಾಡಿ ಹೊಸ ಕಾನೂನು ಜಾರಿಗೆ ಬರುವಾಗ ಕೆಲವು ನಿಯಮಗಳನ್ನು ಹಾಕಿದ್ದೇವೆ. ಆದರೆ ಕಾರ್ಪೊರೇಷನ್ ಅವರು ಅದಕ್ಕೆ ಏನು ಮಾಹಿತಿಗಳನ್ನೂ ಕೊಡಬೇಕಾಗಿತ್ತೋ, ಅವುಗಳನ್ನು ಕೊಡದಿರುವುದರಿಂದ ಈ ಒಂದು ಪರಿಸ್ಥಿತಿ ಇದೆ. ಮುಖ್ಯವಾಗಿ ಕಾರ್ಪೊರೇಷನ್‌ಗೆ ಅನುಕೂಲವಾಗುವ ರೀತಿಯಲ್ಲಿ ಹಣ ಒದಗಿಸಬೇಕೆಂಬುದೇ ಸರ್ಕಾರದ ಅಭಿಪ್ರಾಯವಾಗಿದೆ.

ಶ್ರೀ ಕೆ. ಶ್ರೀರಾಮುಲು.— ನನ್ನ (೧) ಪ್ರಶ್ನೆಗೆ ಉತ್ತರವಾಗಿ ಹೇಳುತ್ತಾ,, ಮಾಲಿಕರು ತೆರಿಗೆ ಪಾವತಿ ಮಾಡಲು ಹೋದಾಗ ಅವರು ವಿಶ್ರಮಿಸಿಕೊಳ್ಳುವುದಕ್ಕೆ ಮತ್ತು ಅವರಿಗೆ ಕುಡಿಯುವ ನೀರಿನ ಸೌಕರ್ಯವನ್ನು ಪ್ರವಸ್ಥೆ ಮಾಡಲಾಗಿದೆ ಎಂದು ಹೇಳಿದ್ದೀರಿ. ತಾವೇನಾದರೂ ಈ ಬಗ್ಗೆ ಸ್ಥಳ ಪರಿಶೀಲನೆ ಮಾಡಿ ನೋಡಿದ್ದೀರಾ ? ನೋಡಿದ್ದರೆ ಎನೇನು ಅನುಕೂಲತೆಗಳನ್ನು ಕಲ್ಪಿಸಲಾಗಿದೆ ಎಂಬುದನ್ನು ಹೇಳುತ್ತೀರಾ ?

ಶ್ರೀ ಕೆ. ಎಚ್. ರಂಗನಾಥ್.— ಆರ್.ಟಿ.ಓ. ಆಫೀಸ್ ನನ್ನ ಮನೆಯ ಹತ್ತಿರವೇ ಇದೆ. ಅಲ್ಲಿ ಏನೇನು ಕಷ್ಟವಿದೆ ಎಂಬುದು ನನಗೆ ಗೊತ್ತಿದೆ. ಅದನ್ನಲ್ಲಾ ಸರಿ ಮಾಡುವುದಕ್ಕೆ ಏನು ಮಾಡಬೇಕು ಎಂಬುದನ್ನು ಸರ್ಕಾರ ವಿಚಾರ ಮಾಡುತ್ತಿದೆ.

COLLECTION OF MOTOR VEHICLE TAXES

363. SRI PRABHAKAR TELKAR (Kalagi).—

Will the Minister for Transport and Housing be pleased to state :—

(*a*) the amount of Motor Vehicle tax collected from each district during 1971-72, 1972-73 and 1973-74 ,